**ಸಿವಿಲ್ ಜಡ್ಜ್  ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.1426/2022**

| | | |
|---|---|---|
| ಸಾಕ್ಷಿದಾರರ ಹೆಸರುಃ | ನಿಂಗಣ್ಣ | ಡಿ ಡಬ್ಲ್ಯೂಃ 1 |
| ತಂದೆಯ ಹೆಸರುಃ | ಭೀಮಸಿಂಗ್ | |
| ವಯಸ್ಸುಃ | 25  ವರ್ಷ | |
| ಉದ್ಯೋಗಃ | ಜೆಸಿಬಿ ಚಾಲಕ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಯಾದಗಿರಿ ಜಿಲ್ಲೆ | **28.04.2023** |

**ಮುಖ್ಯ ವಿಚಾರಣೆಃ** ಆರೋಪಿ ಪರ ವಕೀಲರವರಿಂದಃ

ನಾನು 2020 ರಲ್ಲಿ ಚಾಮನಹಳ್ಳಿ ಗ್ರಾಮದಲ್ಲಿ ಜೆಸಿಬಿಯಲ್ಲಿ ಚಾಲಕನ್ನಾಗಿ ಕೆಲಸ ಮಾಡಲು ಬಂದಿರುತ್ತೇನೆ. ಕೆಲಸದ ಸಮಯದಲ್ಲಿ ನನಗೆ ಪಿರ್ಯಾದಾದುರಾದ ರವಿರವರ ಪರಿಚಯ ಆಗಿರುತ್ತದೆ. ಒಂದು ದಿನ ಸದರಿಯವರು ಅವರ ಜಮೀನಿನಲ್ಲಿ ಜೆಸಿಬಿ ಕೆಲಸಕ್ಕೆಂದು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ನಾನು ಸ್ವಲ್ಪ ದಿನಗಳ ಕಾಲ ಅಲ್ಲಿ ಕೆಲಸ ಮಾಡಿರುತ್ತೇನೆ.

ನಾನು ಸದರಿಯವರಿಗೆ ಮನೆಯ ಬಾಡಿಗೆಯ ಮುಂಗಡ ಹಣ ಕಟ್ಟುವ ಸಲುವಾಗಿ ರೂ.3 ಲಕ್ಷ ಹಣವನ್ನು ಪಡೆದಿರುತ್ತೇನೆ. ಸದರಿಯವರಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಪಿರ್ಯಾದಾದುರಾರರು ಕಮಿಷನ ಹಣವನ್ನು ಬಹಳಷ್ಟು ತೆಗೆದುಕೊಳ್ಳುತ್ತಿದ್ದರು. ಆದಕಾರಣ ನಾನು ಬೇರೆಯವರಲ್ಲಿ ಕೆಲಸಕ್ಕೆ ಹೋಗಿರುತ್ತೇನೆ. ಪಿರ್ಯಾದುದಾರರ ಅವರು ನೀಡಿರುವ ಹಣವನ್ನು ನನಗೆ ಕೇಳಿರುತ್ತಾರೆ. ನಾನು ಜೆಸಿಬಿ ಕೆಲಸ ಮಾಡಿದ ಹಣವನ್ನು ಕಟಾವು ಮಾಡಿ ಉಳಿದ ಹಣವನ್ನು ನೀಡುತ್ತೇನೆ ಎಂದು ಹೇಳಿರುತ್ತೇನೆ. ಆ ಸಮಯದಲ್ಲಿ ನನ್ನ ಬಳಿ ಹಣ ಇರಲಿಲ್ಲ. ಅದಕ್ಕೆ ರವಿರವರು ನಾನು ಬೇರೆ ಊರಿನ ನಿವಾಸಿಯಾದ ಕಾರಣ ಸ್ಥಳೀಯ ವ್ಯಕ್ತಿಯ ಕಡೆಯಿಂದ ಭರವಸೆ ನೀಡುವಂತೆ ಕೇಳಿರುತ್ತಾರೆ. ಶಬರೀಶರವರು ಪಿರ್ಯಾದುದಾರರ ಮಾವ ಆಗಿರುತ್ತಾರೆ. ಹಣದ ಮರುಪಾವತಿಗಾಗಿ ನನ್ನಿಂದ ಸಹಿ ಮಾಡಿದ

ಒಂದು ಖಾಲಿ ಚೆಕ್ಕನ್ನು ಹಾಗೂ ಶಬರೀಶರವರ ಕಡೆಯಿಂದ 2 ಸಹಿ ಮಾಡಿದ ಖಾಲಿ ಚಕ್ಕುಗಳನ್ನು ಭದ್ರತೆಗಾಗಿ ಪಡೆದುಕೊಂಡಿರುತ್ತಾರೆ. ಸ್ವಲ್ಪ ದಿನಗಳ ನಂತರ ರವಿರವರು ಜೆಸಿಬಿ ಕೆಲಸಕ್ಕೆ ಎಂದು ನನ್ನನ್ನು ಕರೆಸಿಕೊಂಡಿದ್ದು, ನಾನು ನೀಡಬೇಕಿದ್ದ ಹಣವನ್ನು ಸದರಿ ಕೆಲಸದ ಬಾಬ್ತು ವಜಾ ಮಾಡಿಕೊಳ್ಳುವುದಾಗಿ ಹೇಳಿರುತ್ತಾರೆ. ಸದರಿಯವರು ಅವರ ಗದ್ದೆಯಲ್ಲಿ ಕೆಲಸ ಮಾಡಿಸಿಕೊಂಡಿದ್ದು, ನನ್ನ ಜೆಸಿಬಿ ವಾಹನದ ಚಕ್ರಗಳ ಗಾಳಿಯನ್ನು ಬಿಟ್ಟು ನನ್ನ ಗಾಡಿ ಅಲ್ಲೇ ನಿಲ್ಲುವಂತೆ ಮಾಡಿರುತ್ತಾರೆ. ಸದರಿಯವರು ಅವರು ನೀಡಿದ್ದ 3 ಲಕ್ಷ ಹಣವನ್ನು ನೀಡಬೇಕು ಎಂದು ನನಗೆ ಹೆದರಿಸಿರುತ್ತಾರೆ. ಆಕಾರಣ ನಾನು ಬನ್ನೂರು ಪೊಲೀಸ ಠಾಣೆಗೆ ಹೋಗಿ ಪಿರ್ಯಾದುದಾರರ ವಿರುದ್ಧ ದೂರು ನೀಡಿರುತ್ತೇನೆ. ಪೊಲೀಸ ಠಾಣೆಯಲ್ಲಿ ಪಿರ್ಯಾದುದಾರರನ್ನು ಕರೆಸಿರುತ್ತಾರೆ. ಆ ಸಮಯದಲ್ಲಿ ರವಿರವರು ತಮಗೆ 5 ಲಕ್ಷ ಹಣವನ್ನು ಹೇಳಿರುತ್ತಾರೆ. ಮತ್ತೇ ವಿಚಾರಣೆ ಮಾಡಿದ್ದ ಸಮಯದಲ್ಲಿ ರವಿರವರು ಅವರಿಗೆ ರೂ.3,55,000/- ಹಣ ನೀಡಬೇಕೆಂದು ಹೇಳಿರುತ್ತಾರೆ. ಅದಕ್ಕೆ ನನ್ನ ಅತ್ತೆ ಬಸಮ್ಮಣಿರವರು ರೂ.2 ಲಕ್ಷ ಮೊತ್ತದ ಒಂದು ಚೆಕ್ ಹಾಗೂ ರೂ.1,55,000/- ಮೊತ್ತದ ಒಟ್ಟು 2 ಸಹಿ ಮಾಡಿದ್ದ ಖಾಲಿ ಚೆಕ್ಕುಗಳನ್ನು ಪಿರ್ಯಾದುದಾರರಿಗೆ ನೀಡಿರುತ್ತಾರೆ. ಆ ಸಮಯದಲ್ಲಿ ನಾವು ಪೊಲೀಸರಿಗೆ ಎಲ್ಲಾ ಚೆಕ್ಕುಗಳನ್ನು ವಾಪಸ ಕೊಡಿಸಿ ನಾವು ಪಿರ್ಯಾದುದಾರರಿಗೆ ಹಣವನ್ನು ನಗದು ರೂಪದಲ್ಲಿ ನೀಡುತ್ತೇವೆ ಎಂದು ಹೇಳಿ ದಿನಾಂಕ 15.10.2021 ರಂದು ಪಿರ್ಯಾದುದಾರರನ್ನು ಠಾಣೆಗೆ ಕರೆಸಲು ಕೇಳಿರುತ್ತೇವೆ. ಸದರಿ ದಿನ ಪೊಲೀಸ ಠಾಣೆಯಲ್ಲಿ ಪೊಲೀಸ ನಿರೀಕ್ಷಕರು ಪಿರ್ಯಾದುದಾರರಿಗೆ ಕರೆ ಮಾಡಿದ್ದರೂ ಸಹ ಸದರಿಯವರು ಬೇರೆ ಊರಿನಲ್ಲಿ ಇರುತ್ತೇನೆ ಹಾಗೂ ಸಾವಿಗೆ ಹೋಗಿರುತ್ತೇನೆ ಎಂದು ಹೇಳಿರುತ್ತಾರೆ. ಸದರಿಯವರು ಪೊಲೀಸ ಠಾಣೆಗೆ ಬಂದಿರುವುದಿಲ್ಲ ಹಾಗೂ ಏಕಾಏಕಿ ವಕೀಲರ ಮೂಲಕ ನೋಟಿಸ್ ಕಳುಹಿಸಿರುತ್ತಾರೆ. ಸದರಿ ನೋಟಿಸಿಗೆ ನಾವು ಪ್ರತ್ಯುತ್ತರ ನೋಟಿಸನನ್ನು ಕಳುಹಿಸಿರುತ್ತೇವೆ. ಸದರಿ ನೋಟಿಸನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪೊಲೀಸ ಠಾಣೆಯಲ್ಲಿ ನಮ್ಮಗಳ ನಡುವೆ ತೀರ್ಮಾನ ಮಾಡಿದಂತೆ ನಾನು ಪಿರ್ಯಾದುದಾರರಿಗೆ ರೂ.3,55,000/- ಹಣವನ್ನು ನೀಡಲು ಸಿದ್ಧನಿರುತ್ತೇನೆ, ಆದರೆ ಆ ಪಿರ್ಯಾದುದಾರರು ನನ್ನ, ಶಬರೀಶ ಮತ್ತು ಬಸಮ್ಮಣಿರವರಿಗೆ ಸೇರಿದ ಎಲ್ಲಾ ಚೆಕ್ಕುಗಳನ್ನು ವಾಪಸ ನೀಡಬೇಕಾಗಿರುತ್ತದೆ.

ಸಾಕ್ಷಿಯು ತಾವು ಪಿರ್ಯಾದುದಾರರಿಗೆ ಕಳುಹಿಸಿದ ದಿನಾಂಕ 27.01.2022 ರ ಪ್ರತ್ಯುತ್ತರ ನೋಟಿಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ನಿಡಿ-1** ಎಂದು, ಅಂಚೆ ರಸೀದಿಯನ್ನು **ನಿಡಿ-2** ಎಂದು, 2 ಪೋಟೋಗಳನ್ನು ಪಿರ್ಯಾದುದಾರರ ತಕರಾರಿಗೆ ಒಳಪಟ್ಟು **ನಿಡಿ-3 ಮತ್ತು ನಿಡಿ-4** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪಿರ್ಯಾದುದಾರರ ಪರ ಶ್ರೀ **ಎಚ್.ಆರ್.ಎಸ್** ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**